

ಪ್ರಾತ್ಯಕ್ಷಿಕೆಯಂತೆ ಇತ್ತು. ಹರಾಜು ನಡೆದಾಗ ಅವರನ್ನು ಆಯ್ಕೆ ಮಾಡಿಕೊಂಡದ್ದು ಟೀಕೆಗೆ ಒಳಪಟ್ಟಿತ್ತು. ಸುಂದರಿ ಎಂಬ ಕಾರಣಕ್ಕೆ ಅವರನ್ನು ಆಯ್ಕೆ ಮಾಡಿಕೊಂಡಿದ್ದಾರೆ ಎಂದೆಲ್ಲ ಲಘುವಾಗಿ ಸಾಮಾಜಿಕ ಮಾಧ್ಯಮದಲ್ಲಿ ಬರೆದವರೂ ಇದ್ದರು. ಆದರೆ, ಇಡೀ ಟೂರ್ನಿಯಲ್ಲಿ ಅವರು ಅತ್ಯಧಿಕ 128 ಡಾಟ್ ಬಾಲ್‌ಗಳನ್ನು ಹಾಕಿದರು. ಮರಿಯಾನ್ ಕಾಪ್ ಕೂಡ 122 ಡಾಟ್ ಬಾಲ್ ಹಾಕಿ ಎರಡನೇ ಸ್ಥಾನದಲ್ಲಿ ಇದ್ದಾರೆ. ಫೈನಲ್ ಪಂದ್ಯದಲ್ಲಿ ಪ್ರಮುಖ ಬೌಲರ್‌ಗಳೂ ಪ್ರತಿ ಓವರ್‌ಗೆ 9 ರನ್ ನೀಡಿದ ಪಿಚ್‌ನಲ್ಲಿ ಬೆಲ್ ಮಾತ್ರ 4 ಓವರ್‌ಗಳ ತಮ್ಮ ಕೋಟಾದಲ್ಲಿ 19 ರನ್‌ಗಳನ್ನಷ್ಟೇ ಕೊಟ್ಟರು. ಡಿ.ಸಿ. ತಂಡದ ಆಕ್ರಮಣಕಾರಿ ಆಟಗಾರ್ತಿ ಲಿಝೆಲ್ ಲೀ ಭುಜಗಳನ್ನು ಸಡಿಲಿಸಲು ಅವರು ಅನುವು ಮಾಡಿಕೊಡದೇ ಹೋದದ್ದು ಆರ್‌ಸಿಬಿಗೆ ವರದಾನವಾಯಿತು. ಇಲ್ಲದೇ ಇದ್ದಲ್ಲಿ ಇನ್ನೂ ದೊಡ್ಡ ಮೊತ್ತವನ್ನು ತಂಡವು ಬೆನ್ನಟ್ಟಬೇಕಾಗುತ್ತಿತ್ತು ಎಂದು ನಾಯಕಿ ಸ್ಮೃತಿ ಹೇಳಿದ್ದು ಸತ್ಯ. ಬೆಲ್ ಟೂರ್ನಿಯಲ್ಲಿ 12 ವಿಕೆಟ್‌ಗಳನ್ನು ಕೂಡ ಪಡೆದರು. ನದೀನ್ ಡಿ ಕ್ಲರ್ಕ್ ಅವರು ಮಹತ್ವದ ಸಂದರ್ಭದಲ್ಲಿ ಆರ್‌ಸಿಬಿಗೆ ಸಾಥ್ ನೀಡುತ್ತಾ ಬಂದು ಒಟ್ಟಾರೆ 16 ವಿಕೆಟ್‌ಗಳನ್ನು ಪಡೆದದ್ದು ಸ್ಮರಣೀಯ.

ಅಷ್ಟೇ ಅಲ್ಲ, ಮುಂಬೈ ಇಂಡಿಯನ್ಸ್ ತಂಡದ ಎದುರಿನ ಒಂದು ಪಂದ್ಯದಲ್ಲಿ ಗೆಲ್ಲಲು ಕೊನೆಯ ಓವರ್‌ನಲ್ಲಿ 18 ರನ್ ಬೇಕಿತ್ತು. ಆಗ ಅನುಭವಿ ಶಿವರ್ ಬ್ರಂಟ್ ಬೌಲಿಂಗ್‌ನಲ್ಲೇ ನದೀನ್ ಎರಡು ಸಿಕ್ಸರ್ ಹಾಗೂ ಎರಡು ಬೌಂಡರಿ ಹೊಡೆದು ಗೆಲುವು ತಂದಿತ್ತಿದ್ದರು. ಡಬ್ಲ್ಯೂಪಿಎಲ್‌ನಲ್ಲಿ ಇದುವರೆಗೆ 15 ರನ್‌ಗಿಂತ ಹೆಚ್ಚಿನ ಗುರಿಯನ್ನು ಕೊನೆಯ ಓವರ್‌ನಲ್ಲಿ ದಾಟಲು ಆಗಿರಲಿಲ್ಲ. ಒತ್ತಡದ ಸನ್ನಿವೇಶಗಳನ್ನು ತಾನು ಇಷ್ಟಪಡುವುದಾಗಿ ನದೀನ್ ಹೇಳಿದ್ದರು. ಚಾಂಪಿಯನ್ ಆಗಲು ಇಂತಹ ಮನಃಸ್ಥಿತಿ ಮುಖ್ಯ ಎನ್ನುವುದನ್ನು ಕಪ್ ಗೆದ್ದ ನಂತರ ಸ್ಮೃತಿ ಅವರೂ ಸ್ಮರಿಸಿಕೊಂಡರು.

ಡಿ.ಸಿ. ತಂಡವು ಹಾಗೆ ನೋಡಿದರೆ ಟೂರ್ನಿಯಿಂದ ಹೊರಗೆ ಹೋಗುವ ಆತಂಕದ ಸ್ಥಿತಿಯಲ್ಲಿ ಇತ್ತು. ಆಗ ಸತತ ಗೆಲುವುಗಳನ್ನು ಪಡೆದು, ತಂಡ ಆತ್ಮವಿಶ್ವಾಸದ ಹಾಲಿಗೆ ಮರಳಲು ಕಾರಣರಾದವರು ನಾಯಕಿ ಜೆಮಿಮಾ ರಾಡ್ರಿಗ್ಸ್. ಚುಟುಕು ಕ್ರಿಕೆಟ್ ವಿಶ್ವಕಪ್‌ನಲ್ಲೂ ಅವರು ತಮ್ಮ ದೃಢ ಧೋರಣೆ ಹಾಗೂ ಚಾಣಾಕ್ಷತನದಿಂದ ಭಾರತವನ್ನು ಗೆಲ್ಲಿಸಿದ್ದ ನೆನಪು ಇತ್ತು. ಅದನ್ನು ಈ ಟೂರ್ನಿಯಲ್ಲೂ ಮುಂದುವರಿಸಿದ್ದಕ್ಕೆ ಶಹಬ್ಬಾಸ್ ಹೇಳಲೇಬೇಕು. ಮಧ್ಯಮ ಕ್ರಮಾಂಕದಲ್ಲಿ ಆಡಿಯೂ ಅವರು 264 ರನ್‌ಗಳನ್ನು ಜಮೆ ಮಾಡಿದ ಟೂರ್ನಿ ಇದು. ಲೀ 320 ರನ್ ಕೂಡಿಹಾಕಿದರೆ, ಲಾರಾ ವೋಲ್ವಾರ್ಟ್ 317 ರನ್‌ಗಳನ್ನು ಹರಿಸಿದರು. ಅನುಭವ ಹೇಗೆಲ್ಲ ವಿಜಯಗಳನ್ನು ತಂದುಕೊಡುತ್ತದೆ ಎನ್ನುವುದಕ್ಕೆ ಈ ಬ್ಯಾಟರ್‌ಗಳ ಪ್ರದರ್ಶನ ಉದಾಹರಣೆಯಾಗಿ ಕಾಣುತ್ತದೆ.

ಆ ತಂಡದ ಬೌಲಿಂಗ್ ವಿಭಾಗದಲ್ಲಿ ನಂದಿನಿ ಶರ್ಮಾ ಒಟ್ಟು 17 ವಿಕೆಟ್ ಪಡೆದು, ಅತಿ ಹೆಚ್ಚು ವಿಕೆಟ್ ಗಳಿಸಿದವರ ಯಾದಿಯಲ್ಲಿ ಮೊದಲ ಸ್ಥಾನದಲ್ಲಿ ಇದ್ದಾರೆ. ಇದೇ ಮೊದಲ ಬಾರಿಗೆ ಡಬ್ಲ್ಯೂಪಿಎಲ್ ಆಡುವ ಅವಕಾಶ ಪಡೆದ ನಂದಿನಿ, ಗುಜರಾತ್ ಜೈಂಟ್ಸ್ ತಂಡದ ವಿರುದ್ಧದ ಪಂದ್ಯದಲ್ಲಿ ಹ್ಯಾಟ್ರಿಕ್ ಸಾಧನೆ ಮಾಡಿದರು. ಆ ಪಂದ್ಯದಲ್ಲಿ ಐದು ವಿಕೆಟ್‌ಗಳ ಗೊಂಚಲನ್ನೂ ಗಳಿಸಿದ್ದು ವಿಶೇಷ. ಚಂಡೀಗಢದ ಈ ಹುಡುಗಿ ಭವಿಷ್ಯದಲ್ಲಿ ಭಾರತ ತಂಡದ ಬೌಲಿಂಗ್‌ಗೆ ಬಲ ತುಂಬುವ ಲಕ್ಷಣಗಳಿವೆ. ಎತ್ತರಕ್ಕೆ ಚೆಂಡು ಪುಟಿಯುವಂತೆ ಮಾಡಬಲ್ಲ, ತುಸು ಒಳನುಗ್ಗುವಂತೆ ಸ್ವಿಂಗ್ ಮಾಡಬಲ್ಲ ಚತುರಮತಿ ಅವರು. ಮಹತ್ವದ ವಿಕೆಟ್ ಪಡೆದರೆ ಸೆಲ್ಯೂಟ್ ಮಾಡುವ ಅವರು ಪಂಜಾಬ್ ನೆಲದ ಛಲವನ್ನಂತೂ ಅಡಗಿಸಿಟ್ಟುಕೊಂಡಿದ್ದಾರೆ.



ಫೈನಲ್‌ನಲ್ಲಿ ದಿಟ್ಟ ಪ್ರದರ್ಶನ ತೋರಿದ ಸ್ಮೃತಿ ಮಂದಾನ

ಫೈನಲ್ ಪಂದ್ಯದ ಕೊನೆಯ ಓವರ್ ಬೌಲ್ ಮಾಡಲು ಬಂದವರು ಶ್ರೀಚರಣಿ. ಅವರನ್ನು ಜೆಮಿಮಾ ನೆಚ್ಚಿಕೊಳ್ಳಲು ಕಾರಣ ವೃತ್ತಿಪರತೆ. ಟಿ20 ವಿಶ್ವಕಪ್‌ನಲ್ಲಿ ಶ್ರೀಚರಣಿ ತೋರಿದ್ದ ಕರಾರುವಾಕ್ ಸ್ಪಿನ್ ಮಾಂತ್ರಿಕತೆ ಈ ಸಲವೂ ಕೈ ಹಿಡಿದೀತು ಎಂದು ಜೆಮಿಮಾ ಭಾವಿಸಿದ್ದು ಸಹಜವೇ. ಆದರೆ ಎರಡು ಬೌಂಡರಿಗಳನ್ನು ರಾಧಾ ಯಾದವ್ ಗಳಿಸಿದ್ದರಿಂದ ಡಿ.ಸಿ. ತಂಡದ ಗೆಲುವಿನ ಕನಸು ನುಚ್ಚುನೂರಾಯಿತು.

ಶ್ರೀಚರಣಿ ಎಷ್ಟು ಮುಖ್ಯವಾದ ಬೌಲರ್ ಎನ್ನುವುದಕ್ಕೆ ಕಳೆದ ವರ್ಷ ಆರ್. ಅಶ್ವಿನ್ ಅವರ ಕುರಿತು ನೀಡಿದ್ದ ವಿಶ್ಲೇಷಣೆ ಪುಷ್ಟಿ ನೀಡುತ್ತದೆ. ನಿಯಂತ್ರಿತವಾದ ಗ್ರಿಪ್, ಚೆಂಡಿಗೆ ಎಷ್ಟು ವೇಗ ದಕ್ಕಬೇಕೊ ಅಷ್ಟನ್ನು ಮಾತ್ರ ಒದಗಿಸುವಂತಹ ಬಾಡಿ ವೇಟ್ ಹಾಕುವ ಆ್ಯಕ್ಷನ್ ಈ ಹುಡುಗಿಯ ಗುರಿಕಾರ ಮನಃಸ್ಥಿತಿಗೆ ಸಾಕ್ಷಿಯಂತಿದೆ ಎಂದು ಅವರು ಹೇಳಿದ್ದರು. ಇಂಗ್ಲೆಂಡ್‌ನ ಸೋಫಿ ಎಕಲ್‌ಸ್ಟನ್ ತರಹದ ಬೌಲರ್‌ಗೆ ಹೈದರಾಬಾದ್‌ನ ಈ ಹುಡುಗಿಯನ್ನು ಅಶ್ವಿನ್ ಹೋಲಿಸಿದ್ದರಲ್ಲಿ ಉತ್ಪ್ರೇಕ್ಷೆಯೇನೂ ಇಲ್ಲ. ಶ್ರೀಚರಣಿ ಈ ಬಾರಿಯ ಡಬ್ಲ್ಯೂಪಿಎಲ್ ಫೈನಲ್ ಪಂದ್ಯದಲ್ಲಿ 4 ಓವರ್‌ಗಳಲ್ಲಿ 46 ರನ್ ಕೊಟ್ಟರು. ಒಂದೂ ವಿಕೆಟ್ ಅವರಿಗೆ ಸಿಗಲಿಲ್ಲ. ಸ್ಮೃತಿ ಅವರಿಗೆ ಈ ಹುಡುಗಿಯ ಬೌಲಿಂಗ್ ನಿಗೂಢತೆಯ ಅರಿವು ಇದೆ. ಬಹುಶಃ ಇದೇ ಕಾರಣಕ್ಕೆ ವಡೋದರಾದ ಸಪಾಟು ಪಿಚ್‌ನಲ್ಲಿ ಹಳೆಯ ಲಯದ ಚರಣ ಪುನರುಚ್ಚರಿಸಲು ಅವರಿಗೆ ಸಾಧ್ಯ ಆಗಲಿಲ್ಲವೇನೋ.

ಹೀಗಿದ್ದರೂ ಶ್ರೀಚರಣಿ ಟೂರ್ನಿಯಲ್ಲಿ 14 ವಿಕೆಟ್ ಪಡೆದರು. ಭವಿಷ್ಯದಲ್ಲಿ ಅವರ ಕುರಿತೂ ತಂಡಕ್ಕೆ ನಿರೀಕ್ಷೆಗಳು ಹೆಚ್ಚಾಗಿವೆ. ಗುಜರಾತ್ ಜೈಂಟ್ಸ್ ತಂಡದ ಸೋಫಿ ಡಿವೈನ್ ಒಟ್ಟು 17 ವಿಕೆಟ್ ಗಳಿಸಿ ಸರಣಿ ಶ್ರೇಷ್ಠ ಆಟಗಾರ್ತಿ ಎನಿಸಿದ್ದು ಅನುಭವಿಗಳ ಪಾರುಪತ್ಯಕ್ಕೆ ಇನ್ನೊಂದು ಉದಾಹರಣೆಯಾಗಿ ಉಳಿಯಿತು.